ಅಡ್ಡ ಬರುವುದಿಲ್ಲವೆಂದು ಮೊನ್ನದಿವಸ ಒಂದು ಸಭೆಯಲ್ಲಿ ನಿಮ್ಮ ಅಧಿಕಾರಿಗಳು ಹೇಳಿದ್ದಾರೆ. ಆದರೆ, ಪುನಃ ಈ ರೀತಿಯಾಗಿ ಉತ್ತರ ಕೊಟ್ಟಿದ್ದೀರಿ. ಕೊಳಚೆ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ನ್ಯಾಯಾಧೀಕರಣ ಅಡ್ಡ ಬರುವುದಿಲ್ಲ ಎಂಬ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಶಿವರಾಜ ಎಸ್. ತಂಗಡಗಿ:– ಮಾನ್ಯ ಅಧ್ಯಕ್ಷರೆ, ಅವರ ಕ್ಷೇತ್ರ ಅಚ್ಚುಕಟ್ಟು ಪ್ರದೇಶವನ್ನು ಕ್ರಿಯೇಟ್ ಮಾಡುವುದಕ್ಕೆ ನಬಾರ್ಡ್‌ಗೆ ನಾವು ಕಳುಹಿಸಿದ್ದೆವು. ಅದು ಕಾವೇರಿ ಕಣಿವೆಗೆ ಸೇರಿದೆ ಎಂದು ಅಲ್ಲಿಂದ ಉತ್ತರ ಬಂದಿದೆ.

ಶ್ರೀ ಹೆಚ್.ಸಿ. ಬಾಲಕೃಷ್ಣ:– ನಬಾರ್ಡ್ ಹಣದಿಂದ ಬೇಡ, ನಿಮ್ಮ ಹಣದಿಂದ ಮಾಡಿ.

ಶ್ರೀ ಶಿವರಾಜ ಎಸ್. ತಂಗಡಗಿ:– ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ಮಾನ್ಯ ಸದಸ್ಯರನ್ನು ಕರೆದು ಚರ್ಚೆ ಮಾಡಿ ಒಂದು ನಿರ್ಧಾರವನ್ನು ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು:– ok. ಮುಂದಿನದು ಮಾನ್ಯ ಹೆಚ್.ಕೆ. ಕುಮಾರಸ್ವಾಮಿಯವರದು ಇದೆ. ಅವರು ಇಲ್ಲ. ಮುಂದಿನದು ಮಾನ್ಯ ಹೆಚ್.ಪಿ. ಮಂಜುನಾಥ್‌ರವರು ಇದೆ. ತಾವು ಕೇಳಿ.

6. ವಿಷಯ: ಕರ್ನಾಟಕ ಗೃಹ ಮಂಡಳಿಯಿಂದ 2008ರಿಂದ 2013ನೇ ಆರ್ಥಿಕ ಸಾಲಿನವರೆಗಿನ ಅವಧಿಯ ಭೂ ಖರೀದಿ, ಭೂ ಸ್ವಾಧೀನ ಮತ್ತು ಅಭಿವೃದ್ಧಿ ಹಾಗೂ ನಿವೇಶನಗಳ/ಮನೆಗಳ/ ಫ್ಲಾಟ್‌ಗಳ ಹಂಚಿಕೆ ವಿಚಾರವಾಗಿ ಭಾರತ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕ ಪರಿಶೋಧಕರು ಸಲ್ಲಿಸಿರುವ ವರದಿಯನ್ವಯ ಮಂಡಳಿಯ ಅಸಮರ್ಪಕ ಕಾರ್ಯ ನಿರ್ವಹಣೆಯಿಂದ ಕರ್ನಾಟಕ ಗೃಹ ಮಂಡಳಿ ಹಾಗೂ

ಸರ್ಕಾರಕ್ಕೆ ಆಗಿರುವ ನಷ್ಟ ಮತ್ತು ರೈತರಿಗೆ ಆಗಿರುವ ವಂಚನೆಯ ಬಗ್ಗೆ.

ಶ್ರೀ ಹೆಚ್.ಪಿ ಮಂಜುನಾಥ:– ಮಾನ್ಯ ಅಧ್ಯಕ್ಷರೆ, ವಿಷಯ: ಕರ್ನಾಟಕ ಗೃಹ ಮಂಡಳಿಯಿಂದ 2008ರಿಂದ 2013ನೇ ಆರ್ಥಿಕ ಸಾಲಿನವರೆಗಿನ ಅವಧಿಯ ಭೂ ಖರೀದಿ, ಭೂ ಸ್ವಾಧೀನ ಮತ್ತು ಅಭಿವೃದ್ಧಿ ಹಾಗೂ ನಿವೇಶನಗಳ/ಮನೆಗಳ/ ಫ್ಲಾಟ್‌ಗಳ ಹಂಚಿಕೆ ವಿಚಾರವಾಗಿ ಭಾರತ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕ ಪರಿಶೋಧಕರು ಸಲ್ಲಿಸಿರುವ ವರದಿಯನ್ವಯ ಮಂಡಳಿಯ ಅಸಮರ್ಪಕ ಕಾರ್ಯ ನಿರ್ವಹಣೆಯಿಂದ ಕರ್ನಾಟಕ ಗೃಹ ಮಂಡಳಿ ಹಾಗೂ ಸರ್ಕಾರಕ್ಕೆ ಆಗಿರುವ ನಷ್ಟ ಮತ್ತು ರೈತರಿಗೆ ಆಗಿರುವ ವಂಚನೆಯ ಬಗ್ಗೆ. ಮಾನ್ಯ ವಸತಿ ಸಚಿವರ ಗಮನ ಸೆಳೆಯುತ್ತೇನೆ.

ಡಾ॥ ಎಂ.ಹೆಚ್. ಅಂಬರೀಷ್ (ಮಾನ್ಯ ವಸತಿ ಸಚಿವರು):– ಮಾನ್ಯ ಅಧ್ಯಕ್ಷರೆ, ಕರ್ನಾಟಕ ಗೃಹ ಮಂಡಳಿಯಿಂದ 2008 ರಿಂದ 2013ನೇ ಆರ್ಥಿಕ ಸಾಲಿನವರೆಗಿನ ಅವಧಿಯ ಭೂಖರೀದಿ, ಭೂಸ್ವಾಧೀನ ಮತ್ತು ಅಭಿವೃದ್ಧಿ ಹಾಗೂ ನಿವೇಶನಗಳ/ಮನೆಗಳ/ಫ್ಲಾಟ್‌ಗಳ ಹಂಚಿಕೆ ವಿಚಾರವಾಗಿ ಭಾರತ ಲೆಕ್ಕನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರು ವರದಿ ಸಲ್ಲಿಸಿದ್ದು, ವರದಿಯಲ್ಲಿರುವ ಅಂಶಗಳು ಸರ್ಕಾರದ ಗಮನಕ್ಕೆ ಬಂದಿರುತ್ತವೆ. ಸದರಿ ವರದಿಯನ್ನು ದಿನಾಂಕ:17–12–2014ರಂದು ಸದನದಲ್ಲಿ ಮಂಡಿಸಲಾಗಿದ್ದು, ವರದಿಯಲ್ಲಿನ ಕಂಡಿಕೆವಾರು ವಿಷಯದ ಬಗ್ಗೆ ಸಾರ್ವಜನಿಕ ಲೆಕ್ಕಪತ್ರ ಸಮಿತಿಯು, ಉತ್ತರಗಳನ್ನು ನೀಡುವಂತೆ ಕರ್ನಾಟಕ ಗೃಹ ಮಂಡಳಿಗೆ ಸೂಚಿಸಿದೆ. ಕರ್ನಾಟಕ ಗೃಹ ಮಂಡಳಿಯಲ್ಲಿನ ಭೂಸ್ವಾಧೀನ, ಯೋಜನೆಗಳ ಅನುಷ್ಠಾನ ಮತ್ತು ಹಂಚಿಕೆಗೆ ಸಂಬಂಧಿಸಿದಂತೆ ಸಿ.ಎ.ಜಿ. ವರದಿಯಲ್ಲಿ ಪ್ರಸ್ತಾಪಿಸಲಾಗಿದೆ. ಮಹಾಲೇಖಪಾಲರ ವರದಿಯಲ್ಲಿ ಪ್ರಸ್ತಾಪಿಸಲಾಗಿರುವ ವಿಷಯಗಳ ಬಗ್ಗೆ ಪರಿಶೀಲಿಸಿ ಕಂಡಿಕೆವಾರು ಉತ್ತರಗಳನ್ನು ಸಿದ್ಧಪಡಿಸಲಾಗುತ್ತಿದ್ದು, ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ ಸಲ್ಲಿಸಲಾಗುವುದು. ಪರಿಶೀಲನೆ ನಂತರ ಅಸಮರ್ಪಕ ಕಾರ್ಯನಿರ್ವಹಣೆಯಿಂದ ಕರ್ನಾಟಕ

ಗೃಹ ಮಂಡಳಿ ಮತ್ತು ಸರ್ಕಾರಕ್ಕೆ ನಷ್ಟ ಉಂಟಾಗಿರುವುದು ಹಾಗೂ ರೈತರಿಗೆ ವಂಚನೆಯಾಗಿರುವುದು ಕಂಡುಬಂದಲ್ಲಿ ಅದಕ್ಕೆ ಕಾರಣರಾದವರ ವಿರುದ್ಧ ನಿಯಮಾವಳಿಗಳನ್ವಯ ಸೂಕ್ತ/ಶಿಸ್ತಿನ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಹೆಚ್.ಪಿ ಮಂಜುನಾಥ್:– ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ನನ್ನ ಸರ್ಕಾರ ತಲೆತಗ್ಗಿಸುವಂಥ ಉತ್ತರ ಬಂದಿರುವುದು ಬಹಳ ನೋವಿನ ಸಂಗತಿಯಾಗಿದೆ. 81 ಪುಟಗಳ ಒಂದು ವರದಿಯನ್ನು ಸಿಎಜಿ ಮಂಡನೆ ಮಾಡಿದೆ. ಅದರಲ್ಲಿನ ಒಂದೊಂದು ಪುಟವೂ ಸಹ ಒಂದೊಂದು ಕರ್ಮಕಾಂಡವನ್ನು ಹೇಳುತ್ತಿದೆ. ಅಂಗೈ ಹುಣ್ಣಿಗೆ ಕನ್ನಡಿ ಬೇಕೇ? ಈ ಉತ್ತರ ನೋಡಿದರೆ ಮತ್ತೆ ಇನ್ನೊಬ್ಬರಿಗೆ ತನಿಖೆಗೆ ಕೊಟ್ಟಿದ್ದಾರೆ. ಅಂದರೆ, ಕಳ್ಳನ ಕೈಗೆ ಬೇಲಿ ಕೊಟ್ಟಂಥ ರೀತಿಯಲ್ಲಿ ಉತ್ತರ ಕೊಟ್ಟಿದ್ದಾರೆ. ಇಲ್ಲಿ 630 ಕೋಟಿ ರೂಪಾಯಿಗಿಂತ ಹೆಚ್ಚು ಹಣ ದುರುಪಯೋಗವಾಗಿದೆ. ಇನ್ನೊಂದು ಕಡೆ ರೈತರಿಗೆ ನೂರಾರು ಕೋಟಿ ರೂಪಾಯಿ ವಂಚನೆ ಆಗಿದೆ. ಇಡೀ ಪತ್ರಿಕೆಗಳಲ್ಲಿ ಬಂದಿರುವ ವಿಚಾರ ಬೇಡ ಹಾಗೆಯೇ ಯಾವುದೇ ಒಂದು influence ನಿಂದ ಕೂಡ ಹೇಳಿಲ್ಲ. ಸಿಎಜಿ ವರದಿಯಲ್ಲಿ ಏನು ಕಂಡು ಬಂದಿದೆ ಅದರ ಬಗ್ಗೆ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಇಲ್ಲಿ ಹೇಳುತ್ತಿದ್ದಾರೆ. ಇದನ್ನು ಸಿಬಿಐಗೆ ಕೊಟ್ಟು ತಪ್ಪಿತಸ್ಥರ ಮೇಲೆ ಆದಷ್ಟು ಬೇಗ prosecutionಗೆ ಸರ್ಕಾರ ಕ್ರಮ ಕೈಗೊಳ್ಳಬೇಕು. ಎರಡನೇ ವಿಷಯ ಇದೆ.

ಅಧ್ಯಕ್ಷರು:– ಸಾಕು, ತಾವು ಸುಮ್ಮನೆ ಕುಳಿತುಕೊಳ್ಳುತ್ತೀರೋ ಇಲ್ಲವೋ ಹೇಳಿ? ಆಡಿಟ್ ರಿಪೋರ್ಟ್ ಪ್ರಕಾರ ಸಿಬಿಐ ಗೆ ಕಳುಹಿಸಬೇಕೆಂದು ಕೇಳುತ್ತಿದ್ದಾರೆ. ಇದು ಆಗುತ್ತದೆಯೋ ಅಥವಾ ಇಲ್ಲವೋ ಎಂಬ ಬಗ್ಗೆ ಉತ್ತರ ಹೇಳಿ.

ಡಾ॥ ಎಂ.ಹೆಚ್. ಅಂಬರೀಷ್ (ವಸತಿ ಸಚಿವರು):– ಮಾನ್ಯ ಅಧ್ಯಕ್ಷರೆ, 2008 ರಿಂದ 2013ರವರೆಗೆ ಭೂಸ್ವಾಧೀನ ಭೂಖರೀದಿ ಮತ್ತು ನಿವೇಶನ ಹಂಚಿಕೆ, ಮನೆಗಳ ಹಂಚಿಕೆ ಇದರ ಬಗ್ಗೆ ಆಡಿಟ್ ಇಲಾಖೆಯವರು ಮತ್ತು Chief Accountant Department ನವರು ವರದಿಯನ್ನು ನಮಗೆ ಕೊಟ್ಟಿದ್ದಾರೆ.

ಅದನ್ನು ದಿನಾಂಕ 17.12.2014 ರಂದು ಬೆಳಗಾವಿಯಲ್ಲಿ ನಡೆದ ಅಧಿವೇಶನದಲ್ಲಿ ನಾನು ಮಂಡಿಸಿದ್ದೇನೆ. ಅದರ ಪ್ರಕಾರ ಎಲ್ಲಾ ವಿಚಾರಗಳ ಬಗ್ಗೆ ನೂನ್ಯತೆ ಇದೆ ಎಂದು ನಮಗೆ ಗುರುತು ಮಾಡಿಕೊಟ್ಟಿದ್ದಾರೆ. ಅದರ ಮಾಹಿತಿಯನ್ನು ತಯಾರು ಮಾಡಿ Public Accounts Committeeಗೆ ಕೊಟ್ಟಿದ್ದೇವೆ. ಇದರಲ್ಲಿ ಯಾರೇ ತಪ್ಪಿತಸ್ಥರೆಂದು ಗೊತ್ತಾದರೆ ಅವರ ಮೇಲೆ ಖಂಡಿತ ಕ್ರಮ ತೆಗೆದುಕೊಳ್ಳುತ್ತೇವೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಸರ್ಕಾರಕ್ಕೆ ಅವಮಾನ ಮಾಡುವುದಕ್ಕೆ ನಾವು ಬಂದಿಲ್ಲ. ಇದನ್ನು ಮಾನ್ಯ ಸದಸ್ಯರು ಜ್ಞಾಪಕ ಇಟ್ಟುಕೊಳ್ಳಬೇಕೆಂದು ಹೇಳುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು:– ಆಯಿತು. ಮುಂದಿನದು ಮಾನ್ಯ ಎನ್.ಹೆಚ್. ಕೋನರೆಡ್ಡಿರವರದು, ಅವರು ಇಲ್ಲ. ಮುಂದಿನದು ಡಾ॥ ಸಿ.ಎನ್. ಅಶ್ವತ್ಥನಾರಾಯಣರವರದು ಇದೆ. ಅವರೂ ಸಹ ಇಲ್ಲ. ಈಗ ಮಾನ್ಯ ಸಹಕಾರ ಸಚಿವರು ಒಂದು ಸಣ್ಣ ಹೇಳಿಕೆಯನ್ನು ಕೊಡುತ್ತಾರೆ.

10. ಕಬ್ಬಿನ ಹಣ ಪಾವತಿ ಬಗ್ಗೆ ಮಾನ್ಯ ಸಹಕಾರ ಸಚಿವರಿಂದ ಉತ್ತರ

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:– ನಿನ್ನೆ ನಾನು ಸದನದಲ್ಲಿ 2013–14ನೇ ಸಾಲಿನ ಕಬ್ಬಿನ ಹಣ ಪಾವತಿ ಮಾಡುವ ವಿಚಾರದಲ್ಲಿ ಒಂದು ಸುಧೀರ್ಘವಾದ ಹೇಳಿಕೆಯನ್ನು ಕೊಟ್ಟು ಅದರ ಬಗ್ಗೆ ಸಾಕಷ್ಟು ಚರ್ಚೆ ನಡೆದು ಮಾನ್ಯ ವಿರೋಧ ಪಕ್ಷದ ಸದಸ್ಯರು ಧರಣಿ ಮಾಡಿದ್ದರು, ಇವತ್ತು ಕೂಡ ಧರಣಿಯನ್ನು ಬೆಳಗ್ಗೆ ಮುಂದುವರೆಸಿದಂಥ ಸಂದರ್ಭದಲ್ಲಿ ಮಾನ್ಯ ಇಂಧನ ಸಚಿವರು ಸರ್ಕಾರದ ಪರವಾಗಿ ಹೇಳಿದ್ದಾರೆ. ನಾನು ಆ ಸಂದರ್ಭದಲ್ಲಿ ವಿಧಾನ ಪರಿಷತ್ತಿನ ಕಲಾಪದಲ್ಲಿ ಭಾಗವಹಿಸಿದ್ದರಿಂದ ಇಲ್ಲಿಗೆ ಬರುವುದರಲ್ಲಿ ಸ್ವಲ್ಪ ವಿಳಂಬವಾಗಿತ್ತು. ಮುಂದುವರೆದಂತಹ ಒಂದು ಹೇಳಿಕೆಯನ್ನು ಸದನದ ಮುಂದೆ ಮಂಡಿಸುವುದಕ್ಕೆ ನಾನು ಬಯಸುತ್ತೇನೆ. ಒಟ್ಟು 60 ಕಾರ್ಖಾನೆಗಳಲ್ಲಿ ಉತ್ತರ ಭಾಗದ 23 ಹಾಗೂ ದಕ್ಷಿಣ ಭಾಗದ 13 ಕಾರ್ಖಾನೆಗಳು ಪತ್ರಿ ಟನ್‌ಗೆ ರೂ. 2300 ಗಳನ್ನು ನೀಡಿರುತ್ತಾರೆ. ಉಳಿದ 24 ಕಾರ್ಖಾನೆಗಳಲ್ಲಿ 10 ಕಾರ್ಖಾನೆಗಳೂ ಪ್ರತಿ ಟನ್‌ಗೆ ರೂ. 2100 ಗಳನ್ನು ಹಾಗೂ ಉಳಿದ ಕಾರ್ಖಾನೆಗಳು ರೂ. 2000 ರೂ.ಗಳನ್ನು ಪ್ರತಿ ಟನ್‌ಗೆ ಹಣ ನೀಡಿರುತ್ತಾರೆ.